## ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಅರಕಲಗೂಡು

**ಸಿ. ಸಿ. ನಂಃ 751/2021**

| | | | |
|---|---|---|---|
| ಸಾಕ್ಷಿಯ ಹೆಸರು | ಃ ಸವಿತಾ | ದಿನಾಂಕ | ಃ 26/02/2024 |
| ಗಂಡನ ಹೆಸರು | ಃ ನಾಗರಾಜು | ಸಿ ಡಬ್ಲ್ಯೂ | ಃ 06 |
| ವಯಸ್ಸು | ಃ 33 ವರ್ಷ | ಪಿ ಡಬ್ಲ್ಯೂ | ಃ 06 |
| ಉದ್ಯೋಗ | ಃ ಗೃಹಿಣಿ | | |
| ವಿಳಾಸ | ಃ ಮರಡಿ ಗ್ರಾಮ | | |

ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಸಸಅ ರವರಿಂದ ಃ-

ಚಾಸಾ 1 ನನ್ನ ಗಂಡ, ಚಾಸಾ 2 ನನ್ನ ಅತ್ತೆ, ಚಾಸಾ 3 ನನ್ನ ಪಕ್ಕದ ಮನೆಯವರು. 3 ನೇ ಆರೋಪಿ ನನ್ನ ಮೈದುನ, ಉಳಿದ ಆರೋಪಿತರು ನನ್ನ ಊರಿನವರು. ಸುಮಾರು 3 ವರ್ಷಗಳ ಹಿಂದೆ 3 ಮತ್ತು 4 ನೇ ಅರೋಪಿತರು ಚಾಸಾ 2 ರವರನ್ನು ಹೊಡೆಯುತ್ತಿದ್ದರು. ಆಗ ಚಾಸಾ 1 ರವರು ಚಾಸಾ 2 ರವರಿಗೆ ಪೊಲೀಸ್ ಠಾಣಗೆ ಹೋಗಿ ದೂರು ನೀಡುವಂತೆ ಹೇಳಿದರು. ಚಾಸಾ 2 ರವರು ದೂರು ಕೊಡಲೆಂದು ಹೋಗುತ್ತಿದ್ದರು. ಆಗ 1 ಮತ್ತು 2 ನೇ ಆರೋಪಿತರು ಚಾಸಾ 2 ರವರನ್ನು ಹಿಡಿದು ಹೊಡೆಯುತ್ತಿದ್ದರು, ಚಾಸಾ 1 ರವರು ಏಕೆ ಹೊಡೆಯುತ್ತಿರುವಿರಿ ಎಂದು ಕೇಳಿದಾಗ ಆರೋಪಿತರೆಲ್ಲರೂ ಸೇರಿ ಚಾಸಾ 1 ರವರಿಗೆ ಹೊಡೆದರು. ಆಗ ನಾನೂ ಸಹ ಕಿರುಚಿಕೊಂಡು ಹೋದಾಗ ಆರೋಪಿತರು ನನಗೂ ಸಹ ಹೊಡೆದರು. ಆಗ ಪಕ್ಕದ ಮನೆಯ ಚಾಸಾ 3 ರವರು ಜಗಳ ಬಿಡಿಸಲು ಬಂದಾಗ ಆರೋಪಿತರು ಅವರಿಗೆ ರಾಡ್ ನಿಂದ ತಲೆಗೆ ಹೊಡೆದರು. ಆರೋಪಿತರೆಲ್ಲರೂ ಸೇರಿ ಕಲ್ಲಿನಿಂದ ರಾಡ್ ನಿಂದ ಹಾಗೂ ದೊಣ್ಣೆಯಿಂದ ಚಾಸಾ 1 , 3 ಮತ್ತು ನನಗೆ ಹೊಡೆದರು. ಚಾಸಾ 3 ರವರಿಗೆ ಗಾಯವಾಗಿ ತಲೆಯಿಂದ ರಕ್ತ ಬರುತ್ತಿತ್ತು. ಆಗ ಚಾಸಾ 4 ರವರು ಕೆಲಸದಿಂದ ಬಂದರು ಹಾಗೂ ಆಟೋಗೆ ಫೋನ್ ಮಾಡಿ ಚಾಸಾ 1 ರಿಂದ 3 ರವರನ್ನು ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋದರು. ಪೊಲೀಸರು ಆಸ್ಪತ್ರೆಗೆ ಬಂದು ನೋಡಿಕೊಂಡು ಹೋಗಿ ದೂರು ಕೊಡಬೇಕೆಂದು ಹೇಳಿ ಹೋದರು. ಚಾಸಾ 1 ರವರು ದೂರು ನೀಡಿರುತ್ತಾರೆ. ನಂತರ ಪೊಲೀಸರು ಮರಡಿ ಗ್ರಾಮಕ್ಕೆ ಮಹಜರ್ ಕ್ರಮ ಜರುಗಿಸಲು ಬಂದಿದ್ದರು ಕೃತ್ಯ ಸ್ಥಳವನ್ನು ನೋಡಿ ಸ್ಥಳ ಮಹಜರ್ ಕ್ರಮ ಜರುಗಿಸಿ ಕಲ್ಲು , ದೊಣ್ಣೆ ಮತ್ತು ರಾಡನ್ನು ಅಮಾನತುಪಡಿಸಿಕೊಂಡರು. ಸದರಿ ಮಹಜರನ್ನು ಮದ್ಯಾಹ್ನ 3.00 ರಿಂದ 3.45 ಗಂಟೆಯವರೆಗೆ ಬರೆದಿರುತ್ತಾರೆ. ನನ್ನ ಜೊತೆ ನಿಪಿ 2 ಮಹಜರ್ ಗೆ ಚಾಸಾ 1 ಮತ್ತು 4 ರವರು ಸಹಿ

ಮಾಡಿರುತ್ತಾರೆ. ಆರೋಪಿತರು ಹಲ್ಲೆಗೆ ಬಳಸಿದ ಕಲ್ಲು, ರಾಡು ಮತ್ತು ದೊಣ್ಣೆಯನ್ನು ನೋಡಿದರೆ ಗುರಸುತ್ತೇನೆ. ಈಗ ನ್ಯಾಯಾಲಯದ ಮುಂದಿರುವ ಎಂ 1 ರಿಂದ 3 ಸದರಿ ವಸ್ತುಗಳಾಗಿರುತ್ತವೆ. ಸ್ಥಳದ ಚಕ್ಕುಬಂದಿ ಹೇಳಲು ಬರುವುದಿಲ್ಲ. ಸಾಕ್ಷಿಗೆ ನಿಪಿ 2 ಮಹಜರ್ ತೋರಿಸಲಾಗಿ ಅದರಲ್ಲಿ ತಮ್ಮ ಸಹಿ ಒಪ್ಪಿದ ಕಾರಣ ಸದರಿ ಸಹಿಯನ್ನು ನಿಪಿ 2(ಸಿ) ಎಂದು ಗುರುತಿಸಲಾಯಿತು.

ಪಾಟೀ ಸವಾಲು ಶ್ರೀ ಜಿ ಡಿ ಎಂ ವಕೀಲರಿಂದ ಆರೋಪಿತರ ಪರವಾಗಿಃ

ಚಾಸಾ 4 ರವರ ಜೊತೆ ನಾನು ಚೆನ್ನಾಗಿದ್ದೇನೆ ಎಂದರೆ ಸರಿ. ಪಿತ್ರಾರ್ಜಿತವಾಗಿ ಬಂದಿರುವ ಜಮೀನನ್ನು ನಾವು ಅನುಭವಿಸುತ್ತಿರುತ್ತೇವೆ ಎಂದರೆ ಸರಿ. 3 ನೇ ಆರೋಪಿ ಹೇಗೆ ಮದುವೆಯಾದರು ಎಂದು ನನಗೆ ಗೊತ್ತಿಲ್ಲ. 3 ನೇ ಆರೋಪಿಗೆ ಪಿತ್ರಾರ್ಜಿತ ಸ್ವತ್ತನ್ನು ನಾವು ಬಿಟ್ಟುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಕೇಶವರವರ ಚಾಸಾ 1 ರವರಿಗೆ ಹೊಡೆಯುತ್ತಿರುವಾಗ ಅಲ್ಲಿ ಬೇರೆ ಯಾರು ಇರಲಿಲ್ಲ, 4 ಜನ ಆರೋಪಿತರು ಇದ್ದರು. ಯಾವ ಆರೋಪಿ ಯಾರಿಗೆ ಯಾವ ಭಾಗಕ್ಕೆ ಹೊಡೆದರು ಎಂದು ಹೇಳಬಲ್ಲೆ, ಸಣ್ಣಯ್ಯನ ಮಗ ಕೇಶವ ರಾಡ್ ನಿಂದ ಚಾಸಾ 1 ರವರಿಗೆ ಹೊಡೆಯಲು ಬಂದಾಗ ಚಾಸಾ3 ರವರಿಗೆ ತಲೆಗೆ ಏಟು ಬಿದ್ದಿರುತ್ತದೆ, ಕೇಶವ ರವರು ದೊಣ್ಣೆಯಿಂದ ಚಾಸಾ 1 ರವರಿಗೆ ಹೊಡೆದರು, 2 ನೇ ಹಾಗೂ 4 ನೇ ಆರೋಪಿ ಕಲ್ಲಿನಿಂದ ಚಾಸಾ 1 ರವರಿಗೆ ಹೊಡೆದರು. ಪೊಲೀಸರು ಘಟನೆಯಾದ 6 ದಿನಗಳ ನಂತರ ಕೃತ್ಯ ಸ್ಥಳಕ್ಕೆ ಮಹಜರ್ ಗಾಗಿ ಬಂದಿದ್ದರು. ಮಹಜರ್ ಮಾಡಿದ ಸ್ಥಳದ ಚಕ್ಕುಬಂದಿ ನನಗೆ ಗೊತ್ತಿಲ್ಲ ಎಂದರೆ ಸರಿ. ಮಹಜರನ್ನು ಚಾಸಾ 8 ರವರು ಬರೆದಿರುತ್ತಾರೆ. ಎಂ ಓ 1 ರಿಂದ 3 ದೊಣ್ಣೆ , ಕಲ್ಲು ಮತ್ತು ರಾಡ್ ಸಾಮಾನ್ಯವಾಗಿ ಎಲ್ಲಾ ಸ್ಥಳದಲ್ಲಿಯೂ ಸಿಗುತ್ತದೆ ಎಂದರೆ ಸರಿ. ನಿಪಿ 2 ಮಹಜರ್ ಮಾಡುವ ಸಮಯದಲ್ಲಿ ಯಾರು ಜನರು ಇರಲಿಲ್ಲ, ನಾನು, ಚಾಸಾ 1 ಮತ್ತು 4 ರವರು ಮಾತ್ರ ಇದ್ದೆವು . ಆರೋಪಿತರು ಚಾಸಾ 1 ಮತ್ತು 2 ರವರನ್ನು ಹೊಡೆದಿರುವುದಿಲ್ಲ, ಚಾಸಾ 1 ಮತ್ತು 2 ರವರು ಅವರೇ ಬಿದ್ದು ಏಟು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪಿತ್ರಾರ್ಜಿತ ಸ್ವತ್ತನ್ನು ಕೇಶವ ರವರಿಗೆ ಕೊಡಬಾರದೆಂಬ ಉದ್ದೇಶದಿಂದ ಅವರ ವಿರುದ್ಧ ಸುಳುಳ ದೂರನ್ನು ಕೊಡಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 2 ಮಹಜರ್ ಗೆ ನಾನು ಸ್ಥಳದಲ್ಲಿ ಸಹಿ ಮಾಡಿರುವುದಿಲ್ಲ , ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸರು ಸ್ಥಳಕ್ಕೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನೇ ಪೊಲೀಸ್ ಠಾಣೆಗೆ ಹೋಗಿ ಎಂ 1 ರಿಂದ 3 ಮುದ್ದೆಮಾಲುಗಳನ್ನು ಪೊಲೀಸರಿಗೆ

ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಯಾವುದೇ ಗಲಾಟೆಯಾಗದಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಮುದ್ದೆಮಾಲಿಗೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರು ದಾುರು ನೀಡಿರುವ ಕಾರಣ ನಾನು ಅವರ ಪರವಾಗಿ ಸಾಕ್ಷ್ಯ ನುಡಿಯುತ್ತಿದ್ದೇನೇ ಎಂದರೆ ಸರಿಯಲ್ಲ.

**( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾ.ದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸ.ಇದೆ.**

**ಜೆಎಂಎಫ್‌ಸಿ, ಅರಕಲಗೂಡು.**